**ಇಂದು ದಿನಾಂಕ 03.07.2026 ರಂದು ಪಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಾನು ದಿನಾಂಕ 06-08-1989 ರಂದು ಹುಟ್ಟಿರುತ್ತೇನೆ. ನಾನು ಬಿ.ಕಾಂ. Final year ಪಾಸ್ ಮಾಡಿಲ್ಲ. ನನ್ನ ತಂದೆ 1984-85 ರಲ್ಲಿ ಖರೀದಿಸಿದ ಸರ್ವೇ ನಂ.133 ರಲ್ಲಿ ವ್ಯವಸಾಯ ಮಾಡುತ್ತಿದ್ದರು. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಗಣಿಗಾರಿಕೆ ನನ್ನ ತಂದೆ 2007 ನೇ ಇಸವಿಯಿಂದ ಮಾಡುತ್ತಿದ್ದಾರೆ. 1996 ರಿಂದಲೇ 1 ಟ್ರ್ಯಾಕ್ಟರ ಮತ್ತು 2 ಲಾರಿಗಳನ್ನು ಇಟ್ಟುಕೊಂಡಿದ್ದೇವೆ. ನನ್ನ ದೊಡ್ಡಪ್ಪ ಯಾವ ವರ್ಷದಿಂದ ಗಣಿಗಾರಿಕೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ.

ನಮ್ಮ ಲಾರಿಗಳಿಗೆ ಸುಜಾತ ಎಂದು ನಾಮಫಲಕ ಇಟ್ಟಿದ್ದೇವೆ ಎಂದರೆ ಸಾಕ್ಷಿದಾರರು ನಮ್ಮ ಮನೆ ದೇವರಾದ ಕೇತಬೈರವೇಶ್ವರ ಸ್ವಾಮಿಯ ಹೆಸರನ್ನು ಇಟ್ಟಿದ್ದೇವೆ. ಈ ಹೇಳಿಕೆಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಇರುವಂತ ವಾಣಿಜ್ಯ ಸಂಕೀರ್ಣ ಅನುಸೂಚಿ 11 ನೇ ಸ್ವತ್ತು ವಾರ್ಡ್ ನಂ.11 ಇರಬಹುದು. ಸದರಿ ವಾಣಿಜ್ಯ ಮಳಿಗೆ ಸುಜಾತ CKR complex ಎಂದು ಇರುತ್ತದೆ ಎಂದರೆ ನಿಜ. ವಾಣಿಜ್ಯ ಸಂಕೀರ್ಣದಿಂದ ನಮಗೆ ಎಷ್ಟು ಬಾಡಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ, ನನ್ನ ತಂದೆಗೆ ಗೊತ್ತು. ವಾದಿ ನಂ.4 ಸುಜಾತನಿಗೆ ನನಗೂ ಏನು ಸಂಬಂಧವಿಲ್ಲ. ಸದರಿ ಸುಜಾತ ನನ್ನ ದೊಡ್ಡಪ್ಪನ ಮಗಳು ಎಂದರೆ ನಿಜ.

Item No.3 ಸರ್ವೇ ನಂ.133/4 ಜಮೀನನ್ನು ಪ್ರತಿವಾದಿ ನಂ.6 ಸ್ಟೆಲ್ಲಾ ಪಿಂಟೋ ಇವರಿಗೆ ಮಾರಾಟ ಮಾಡಿದ್ದು ಇರುತ್ತದೆ ಎಂದರೆ ನಿಜ. ಅದರಂತೆ Item No.9 ಸರ್ವೇ ನಂ.76/6 ರನ್ನು ಪ್ರತಿವಾದಿ ನಂ.5 ಭಾಗ್ಯ ಇವರಿಗೆ ಮಾರಾಟ ಮಾಡಿದ್ದು ಇರುತ್ತದೆ ಎಂದರೆ ನಿಜ.

Item No.1 ಸರ್ವೇ ನಂ.78, Item No.2 ಸರ್ವೇ ನಂ.88 ರನ್ನು ನನ್ನ ಅಜ್ಜಿ ತೀರಿ ಹೋದ ನಂತರ 2014 ರಲ್ಲಿ ಪಾವತಿ ಖಾತೆ ಮುಖಾಂತರ ನಮಗೆ ಬಂದವು ಎಂದರೆ ನಿಜ. ಸರ್ವೇ ನಂ.78 ನನ್ನ ದೊಡ್ಡಮ್ಮ ಮತ್ತು ನನ್ನ ತಂದೆ ಹೆಸರಿಗೆ ಜಂಟಿ ಖಾತಾ ಆಗಿದ್ದು, ಸರ್ವೇ ನಂ.88/1 16

ಗುಂಟೆ 3 ಜನರ ಹೆಸರಿಗೆ ಅಂದರೆ ನನ್ನ ದೊಡ್ಡಮ್ಮ, ನನ್ನ ತಂದೆ ಮತ್ತು ನನ್ನ ಅತ್ತೆಯ ಹೆಸರಿಗೆ ಜಂಟಿ ಖಾತೆ ಆಗಿರುತ್ತದೆ. ಈ 2 ಸರ್ವೇ ನಂಬರಗಳು ಇನ್ನು ಜಂಟಿಯಾಗಿವೆ ಎಂದರೆ ನಿಜ. ನನ್ನ ತಂದೆಗೆ ಇಬ್ಬರು ಸಹೋದರಿಯರು ಎಂದರೆ ನಿಜ. ಸದರಿ ಸಹೋದರಿಯರಿಗೆ ಯಾವುದೇ ರೀತಿ ಆಸ್ತಿಯನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿದಾರರು ಅದು ನನ್ನ ಅಜ್ಜಿಯ ಆಸ್ತಿ ಎಂದು ಹೇಳುತ್ತಾರೆ. ನನ್ನ ಅತ್ತೆ ಆದ ದೊಡ್ಡಅಕ್ಕಾಯಮ್ಮ ಅವರು ಅವಿವಾಹಿತರು ಎಂದರೆ ನಿಜ.

ನಾವು ಇಲ್ಲಿಯವರೆಗೂ ಪಾಲು ಪಟ್ಟಿ ಅಥವಾ ವಿಭಾಗ ಪಟ್ಟಿ ಮಾಡಿಕೊಂಡಿಲ್ಲ ಎಂದರೆ ಸಾಕ್ಷಿದಾರರು ಒಟ್ಟು ಕುಟುಂಬದ ಆಸ್ತಿ ಯಾವುದು ಇರಲಾರದ ಕಾರಣ ಮಾಡಿಕೊಂಡಿಲ್ಲ ಎನ್ನು ತ್ತಾರೆ.

ನನ್ನ ಅತ್ತೆ ಜಯಮ್ಮ ಮದುವೆ ನಂತರ ನಮ್ಮ ಊರಿನ್ಲಲ್ಲಿ ಒಂದು ಆಸ್ತಿಯನ್ನು ಖರೀದಿ ಮಾಡಿರುತ್ತಾರೆ, ಸದರಿ ಆಸ್ತಿ ಅವರ ಸ್ವಯಾರ್ಜಿತ ಆಸ್ತಿ ಎಂದರೆ ನಿಜ. ಅದರಂತೆ ದೊಡ್ಡಅಕ್ಕಾಯಮ್ಮ ಸಹ ಅದೇ ಊರಿನಲ್ಲಿ ಇನ್ನೊಂದು ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ನಿಜ, ಸದರಿ ಆಸ್ತಿ ಅವರ ಸ್ವಯಾರ್ಜಿತ ಆಸ್ತಿ ಎಂದರೆ ನಿಜ.

ದೇವನಹಳ್ಳಿಯ ಮಂಜುನಾಥ ಲೇಔಟ್‌ನಲ್ಲಿ 2 ಮನೆಗಳು ನನ್ನ ತಾಯಿಯ ಹೆಸರಿನಲ್ಲಿ ಇರುತ್ತವೆ. ಸದರಿ ಮನೆಗಳು ಈ ಮುಂಚೆ ನನ್ನ ತಂದೆ ಹೆಸರಿನಲ್ಲಿ ಇದ್ದು ಭಾಗ ಬೇಡುತ್ತಾರೆ ಎಂದು ನನ್ನ ತಾಯಿಯ ಹೆಸರಿನಲ್ಲಿ ವರ್ಗಾಯಿಸಿದ್ದು ಇರುತ್ತದೆ ಎಂದರೆ ಸಾಕ್ಷಿದಾರರು ನನ್ನ ತಾಯಿಯ ಹೆಸರಿನಲ್ಲಿ ಕ್ರಯಕ್ಕೆ ಪಡೆದಿರುತ್ತದೆ ಎಂದು ಹೇಳುತ್ತಾರೆ. 1 ನೇ Item Number ಸ್ವತ್ತಿನ ಪಕ್ಕದ ಫೂಟ್ ಕರಾಬ್ 10 ಗುಂಟೆ ಜಾಗೆಯಲ್ಲಿ 2 ಮನೆಗಳನ್ನು ಕಟ್ಟಿದ್ದೀರಿ ಎಂದರೆ ಸಾಕ್ಷಿದಾರರು 2 ನಿವೇಶನಗಳು ಸರ್ಕಾರದಿಂದ / ಪಂಚಾಯಿತಿಯಿಂದ ನನ್ನ ತಂದೆ ತಾಯಿಯ ಹೆಸರಿನಲ್ಲಿ ಮಂಜೂರಾತಿ ಆಗಿರುವ ಜಾಗಗಳಲ್ಲಿ ಮನೆಗಳನ್ನು ಕಟ್ಟಿದ್ದೇವೆ ಎಂದು ಹೇಳುತ್ತಾರೆ. ಸದರಿ ನಿವೇಶನಗಳು 40*60 ಜಾಗಗಳಿರುತ್ತವೆ. ನಿವೇಶನಗಳನ್ನು ಆಸ್ತಿ ಇಲ್ಲದವರಿಗೆ ಹಂಚಿಕೆ ಮಾಡುತ್ತಾರೆ ಎಂದರೆ ಸಾಕ್ಷಿದಾರರು ಆಸ್ತಿ ಸಂಪಾದನೆಕ್ಕಿಂತ ಮುಂಚಿತವಾಗಿ ಮಂಜೂರಾದ ಆಸ್ತಿ ಎನನುತ್ತಾರೆ.

ನಾವು ದೇವನಹಳ್ಳಿಗೆ ಬಂದು 16 ವರ್ಷಗಳಾಯಿತು. ಚಿಕ್ಕಸಣ್ಣೆ ಗ್ರಾಮದಲ್ಲಿ ನಮ್ಮ ಮನೆ ಖಾಲಿ ಇರುತ್ತದೆ ಎಂದರೆ ನಿಜ.

2012 ನೇ ಇಸವಿಯಲ್ಲಿ ನನ್ನ ಮತ್ತು ನನ್ನ ದೊಡ್ಡಪ್ಪನ ಮಗನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಆಗಿರುತ್ತದೆ ಎಂದರೆ ನಿಜ.

ನನ್ನ ದೊಡ್ಡಪ್ಪನವರು ಗಳಿಸಿಕೊಂಡ ಆಸ್ತಿಗಳ ವಿವರಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನ್ನ ದೊಡ್ಡಪ್ಪನ ಹತ್ತಿರ ಸಹ 2 ಲಾರಿಗಳು ಮತ್ತು 2 ಟ್ರ್ಯಾಕ್ಟರ್‌ಗಳು ಇದ್ದವು. ಸದರಿಯವರು ಸಹ ಜಮೀನು ಮತ್ತು ನಿವೇಶನಗಳನ್ನು ಖರೀದಿಸಿದ್ದರು. ನನ್ನ ದೊಡ್ಡಪ್ಪನ ಮಗನ ವಿದ್ಯಾಭ್ಯಾಸದ ಕುರಿತು ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪನ ಮಗ ನನ್ನ ತಂದೆಯ ಜೊತೆ ಕೂಲಿ ಕಾರ್ಮಿಕರನ್ನು ನೋಡಿಕೊಳ್ಳುವುದು ಮತ್ತು ಗಣಿಗಾರಿಕೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನಗೆ ಒಟ್ಟು ಕುಟುಂಬದ ಕುರಿತು ಯಾವುದೇ ರೀತಿ ಮಾಹಿತಿ ಇಲ್ಲದಿದ್ದರೂ ಮಾಹಿತಿ ಇದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪನ ಗಣಿಗಾರಿಕೆಯನ್ನು ಅವರಿಗೆ ತಿಳುವಳಿಕೆ ಜ್ಞಾನ ಕಡಿಮೆ ಇದ್ದ ಕಾರಣ ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ಸುಗಂಧರಾಜ ಹೂವಿನ ಗಿಡಗಳನ್ನು ಸರ್ವೇ ನಂ.88 ರಲ್ಲಿ ಬೆಳೆಯುತ್ತಿದ್ದೆವು ಎಂದರೆ ಸಾಕ್ಷಿದಾರರು ಸರ್ವೇ ನಂ.133 ರಲ್ಲಿ ಬೆಳೆಯುತ್ತಿದ್ದೆವು ಎನನುತ್ತಾರೆ.

**ಮರುವಿಚಾರಣೆಃ ಇಲ್ಲ**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**